ದಿನಾಂಕಃ 19.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃವಾದಿ ಪರ ಶ್ರೀ.ಎಸ್.ಬಿ.ಹೆಚ್ ವಕೀಲರಿಂದಃ</u>**

ನಾನು 3 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ನನಗೆ ಸ್ವಲ್ಪ ಮಟ್ಟಿಗೆ ಕನ್ನಡ ಓದಲು- ಬರೆಯಲು ಬರುತ್ತದೆ. ನಾನು ಕನ್ನಡ ಭಾಷೆಯಲ್ಲಿ ಸಹಿ ಹಾಕುತ್ತೇನೆ. ಪ್ರಸ್ತುತ ದಾವೆಯನ್ನು 1ನೇ ವಾದಿ ಮಹಾದೇವಿ ನಾಲ್ಕು ಜನರ ಮೇಲೆ ಹೂಡಿರುತ್ತಾಳೆ. ಯಾರ ಮೇಲೆ ಹೂಡಿರುತ್ತಾಳೆಂದರೆ ಚಂದ್ರಯ್ಯ, ಅಡಿವೆಯ್ಯಾ, ಮಲ್ಲಯ್ಯಾ ಮತ್ತು ಶೇಖಯ್ಯಾರವರ ಮೇಲೆ ಹಾಕಿರುತ್ತಾಳೆ. 04 ಎಕರೆ 02 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತಾಳೆ. ಚಂದ್ರಯ್ಯ ಮತ್ತು ಅಡಿವೆಯ್ಯಾ ಖರೀದಿಸಿದ ಜಮೀನುಗಳು ದಕ್ಷಿಣೋತ್ತರ ಪಟ್ಟಿಗಳು ಇರುತ್ತವೆ. ಅವರು ಮತ್ತು ನಾನು ಖರೀದಿಸಿದ ಜಮೀನುಗಳು ಒಂದೇ ಸರ್ವೆ ನಂಬರನಲ್ಲಿ ಬರುತ್ತವೆ. ಚಂದ್ರಯ್ಯ ಖರೀದಿಸಿದ ಜಮೀನು ಉತ್ತರ ದಿಕ್ಕಿಗೆ ಇದ್ದು, ನಾನು ಖರೀದಿಸಿದ ಜಮೀನು ದಕ್ಷಿಣ ದಿಕ್ಕಿಗೆ ಬರುತ್ತದೆ. ನನ್ನ ಹಾಗೂ ಚಂದ್ರಯ್ಯ ಇಬ್ಬರು ಜಮೀನಿನ ಮದ್ಯೆ ಚನ್ನಬಸಯ್ಯ ಪಡದಯ್ಯಾ ಹಿರೇಮಠ ಅಂದರೆ 12 ನೇ ಪ್ರತಿವಾದಿಯ ಜಮೀನು ಬರುತ್ತದೆ. ಸದರಿ ಜಮೀನನ್ನು ಸಹ ಚಂದ್ರಯ್ಯ ಅಂದರೆ 8 ನೇ ಪ್ರತಿವಾದಿ ಖರೀದಿಸಿರುತ್ತಾನೆ. 8 ನೇ ಪ್ರತಿವಾದಿ ಖರೀದಿಸಿದ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಬಸಪ್ಪ ರಾಮಪ್ಪ ಇಟ್ನಾಳರವರ ಜಮೀನು, ಪಶ್ಚಿಮಕ್ಕೆ- ಅಡಿವೆಯ್ಯಾ ಸಿದ್ರಾಮಯ್ಯಾ ಹಿರೇಮಠ ಅಂದರೆ 9 ನೇ ಪ್ರತಿವಾದಿಯ ಜಮೀನು ಅದ ರ ಸರ್ವೆ ನಂಬರ 396/3, ದಕ್ಷಿಣಕ್ಕೆ-ಸರಕಾರಿ ಮಡ್ಡಿ, ಉತ್ತರಕ್ಕೆ- 8 ನೇ ಪ್ರತಿವಾದಿಯ ಮೂಲ ಜಮೀನು ಇರುತ್ತದೆ. ನಾನು ಖರೀದಿಸಿದ ಜಮೀನಿನ ಸರ್ವೆ ನಂಬರ 406/4 ಕ್ಷೇತ್ರ 02 ಎಕರೆ 02 ಗುಂಟೆ ಇರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ ಬಸಪ್ಪ ರಾಮಪ್ಪ ಇಟ್ನಾಳರವರ ಜಮೀನು, ಪಶ್ಚಿಮಕ್ಕೆ- ನಮ್ಮ ಮೂಲ ಜಮೀನು ,

ದಕ್ಷಿಣಕ್ಕೆ-ಸರಕಾರಿ ಮಡ್ಡಿ, ಉತ್ತರಕ್ಕೆ- 8ನೇ ಪ್ರತಿವಾದಿಯ ಜಮೀನು ಇರುತ್ತದೆ. ಸದರಿ 8ನೇ ಪ್ರತಿವಾದಿಯ ಸರ್ವೆ ನಂಬರ ನನಗೆ ನೆನಪಿಲ್ಲ. 8 ನೇ ಪ್ರತಿವಾದಿ ಖರೀದಿಸಿದ ಜಮೀನಿನ ಬಗ್ಗೆ ಸಾಕ್ಷ್ಯ ನುಡಿಯಲು ನನಗೆ ಅವಶ್ಯಕತೆ ಇರುವುದಿಲ್ಲ ಏಕೆಂದರೆ ಅವನು ಈಗಾಗಲೇ ತನ್ನ ಪರವಾಗಿ ಸಾಕ್ಷ್ಯ ನುಡಿದಿರುತ್ತಾನೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಸಂಗತಿಗಳು ನನಗೆ ತಿಳಿದಿರುತ್ತವೆ. 8ನೇ ಪ್ರತಿವಾದಿ ಖರೀದಿಸಿದ ಜಮೀನಿನ ಬಗ್ಗೆ ಏಕೆ ಹೇಳಿರುತ್ತೀರಿ? ಎಂದರೆ ಸಾಕ್ಷಿಯು ನಾವು ಜಮೀನನ್ನು ಖರೀದಿಸಿದ್ದು, ಆತನು ಸಹ ಖರೀದಿಸಿರುತ್ತಾನೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ಖಂಡಿಕೆ 3 ರಲ್ಲಿರುವ ವಿಷಯಗಳ ಬಗ್ಗೆ ಮೂಲ ತಕರಾರಿನಲ್ಲಿ ಬರೆಸಿರುತ್ತೇನೆ.

ಮೇಲೆ ಹೇಳಿದ ಜಮೀನುಗಳು ಚಕ್ಕುಬಂದಿಯನ್ನು ಸದರಿ ಜಮೀನುಗಳ ಖರೀದಿ ಪತ್ರದಲ್ಲಿ ಬರೆಸಲಾಗಿರುತ್ತದೆ. 8 ಮತ್ತು 9ನೇ ಪ್ರತಿವಾದಿಯರು ಜಮೀನುಗಳನ್ನು ಖರೀದಿಸುವ ವ್ಯವಹಾರದಲ್ಲಿ ನೀವು ಭಾಗಿಯಾಗಿರುತ್ತೀರಾ? ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ನೆನಪಿಲ್ಲ ಎಂದು ನುಡಿಯುತ್ತಾರೆ. ನಮ್ಮ ಜಮೀನುಗಳ ಉತಾರೆಗಳನ್ನು ನೋಡಿ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ. 1ನೇ ವಾದಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಆಬಗ್ಗೆ ವಕೀಲರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ವಕೀಲರು 1ನೇ ವಾದಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ಹೇಳಿರುತ್ತಾರೆ. ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು ಹೇಳಿರುತ್ತಾರೆಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿದ ನಂತರವೂ ಸಹ ನಾನು ಸದರಿ ದಾಖಲೆಗಳ ಬಗ್ಗೆ ವಿಚಾರಿಸಿರುವುದಿಲ್ಲ.

ನಿಡಿ.4 ರಿಂದ ನಿಡಿ.7 ಖರೀದಿ ಪತ್ರಗಳನ್ನು ಎಮ್.ಕೆ.ಕುಲಕರ್ಣಿ ದಸ್ತುಬರಹಗಾರರು ಬರೆದಿರುತ್ತಾರೆಂದರೆ ನಿಜ. ಸದರಿ ಖರೀದಿ ಪತ್ರಗಳಲ್ಲಿ ದೇವೇಂದ್ರಯ್ಯನ ಹೆಬ್ಬೆಟ್ಟಿನ ಗುರುತನ್ನು ಯಾರು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಕಾಳವ್ವ ಎಂಬ ಹೆಸರಿನ ಅಕ್ಕ ಇರುತ್ತಾಳೆಂದರೆ ನಿಜ. ಅವಳನ್ನು ವಿರೂಪಾಕ್ಷಯ್ಯಾ ವಿಭೂತಿಮಠರವರಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ನಿಜ. ಅವಳು ತನ್ನ ಗಂಡನ ಮನೆಯಾದ ಬಗರನಾಳ ಗ್ರಾಮದಲ್ಲಿ ವಾಸವಾಗಿದ್ದಾಳೆ. ನಮ್ಮ ಅಣ್ಣ 9 ನೇ ಪ್ರತಿವಾದಿಯ ಖರೀದಿ ಪತ್ರಕ್ಕೆ ಅಂದರೆ ನಿಡಿ.6 ಕ್ಕೆ ನನ್ನ ಅಕ್ಕ ಕಾಳವ್ವನ ಗಂಡ ವಿರೂಪಾಕ್ಷ್ಯಯ್ಯ ಸಾಕ್ಷಿದಾರನಾಗಿ ಸಹಿ ಹಾಕಿರುತ್ತಾನೆಂದರೆ ನಿಜ. ನಾನು, 9 ನೇ ಪ್ರತಿವಾಧಿ ನಮ್ಮ ಮಾವ ವಿರೂಪಾಕ್ಷ್ಯಯ್ಯಾ ಎಲ್ಲರೂ ಸೇರಿಕೊಂಡು ರಾಮಯ್ಯನ ಹೆಣ್ಣುವಕ್ಕಳಿಗೆ ಅಂದರೆ ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಪಾಲು ಸಿಗಬಾರದೆಂಬ ಉದ್ದೇಶದಿಂದ ಖೊಟ್ಟಿ ಖರೀದಿ ಪತ್ರಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ವಾದಿಯರ ಮೂಲಪುರುಷ ರಾಮಯ್ಯ ಯಾವಾಗ ತೀರಿಕೊಂಡಿರುತ್ತಾನೆಂದು ನನಗೆ ಹೇಳಲು ಆಗುವುದಿಲ್ಲ. ಸದರಿ ರಾಮಯ್ಯನ ಹೆಂಡತಿಯ ಹೆಸರು ತಂಗೆವ್ವ ಎಂದರೆ ನಿಜ. ಸದರಿಯವರಿಗೆ 04 ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಎಂದರೆ ನಿಜ. 1. ಶಂಕ್ರಯ್ಯಾ, 2. ಕಾಶವ್ವಾ, 3. ದೇವೇಂದ್ರಯ್ಯಾ ,4. ಸುಶೀಲವ್ವ, 5. ಗಂಗವ್ವ, 6. ಮಹಾದೇವಿ ಇರುತ್ತಾರೆಂದರೆ ನಿಜ. ಅವರ ಪೈಕಿ ಶಂಕ್ರಯ್ಯ ತೀರಿಕೊಂಡಿರುತ್ತಾರೆಂದರೆ ನಿಜ. ಅವನ ಹೆಂಡತಿಯ ಹೆಸರು ಭದ್ರವ್ವ. ಅವಳು ಸಹ ತೀರಿಕೊಂಡಿರುತ್ತಾಳೆ. ಅವರಿಗೆ ಒಬ್ಬನೇ ಮಗ ರಾಮಯ್ಯಾ ಇದ್ದು, ಆತನು ಸಹ ಮದುವೆಯಾಗದೇ ತೀರಿಕೊಂಡಿರುತ್ತಾನೆಂದರೆ ನಿಜ. ಅದೇ ರೀತಿ ಮೇಲೆ ಹೇಳಿದ ದೇವೆಂದ್ರಯ್ಯಾ ಸಹ

ತೀರಿಕೊಂಡಿರುತ್ತಾನೆಂದರೆ ನಿಜ. ದೇವೇಂದ್ರಯ್ಯಾನ ಹೆಂಡತಿ ಗಂಗವ್ವ ಸಹ ತೀರಿಕೊಂಡಿರುತ್ತಾಳೆಂದರೆ ಸಾಕ್ಷಿಯು ಅವಳು ಬದುಕಿದ್ದಾಳೆ ಆದರೆ ಎಲ್ಲಿ ವಾಸ ಇರುತ್ತಾಳೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀಯವರಿಗೆ ಇಬ್ಬರು ಮಕ್ಕಳು ಅಂದರೆ 1. ಅಣ್ಣವ್ವ ಮತ್ತು 2. ಮಹಾದೇವಿ ಇರುತ್ತಾರೆಂದರೆ ನಿಜ. ಪ್ರತಿವಾದ ಪತ್ರ ಸಲ್ಲಿಸುವ ಪೂರ್ವದಲ್ಲಿ ದೇವೇಂದ್ರಯ್ಯಾನ ಹೆಂಡತಿ ಗಂಗವ್ವ ಬದುಕಿದ್ದ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ಸಾಕ್ಷಿ ಮುಂದುವರೆದು ಅವಳು ಎಲ್ಲಿ ಇರುತ್ತಾಳೆಂದು ಪತ್ತೆ ಇರುವುದಿಲ್ಲ ಆದ್ದರಿಂದ ಸದರಿ ಸಂಗತಿಯನ್ನು ನನ್ನ ಪ್ರತಿವಾದ ಪತ್ರದಲ್ಲಾಗಲಿ , ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ಹೇಳಿರುವುದಿಲ್ಲ.

ವಾದಿಯರ ಮೂಲ ಪುರುಷ ರಾಮಯ್ಯನು ದಿ.29.06.1967 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ರಾಮಯ್ಯನ ತಂದೆ ಬಸಯ್ಯನು ದಿ.02.12.1974 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ರಾಮಯ್ಯನ ಮೊದಲನೇ ಮಗ ಶಂಕ್ರಯ್ಯಾ ದಿ. 01.08.1986 ರಲ್ಲಿ ತೀರಿಕೊಂಡಿರುತ್ತಾನೆಂದರೆ ಇರಬಹುದು.

ದಾವಾ ಆಸ್ತಿಗಳು ವಾದಿಯರಿಗೆ ತಮ್ಮ ಪೂರ್ವಜರಿಂದ ಬಂದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ರಾಮಯ್ಯ ಬದುಕಿದ್ದಾಗ ಆತನ ಮಕ್ಕಳ ಮದ್ಯೆ ವಾಟ್ನಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಮಯ್ಯ ತೀರಿಕೊಂಡ ನಂತರವೂ ಸಹ ಆತನ ಎಲ್ಲಾ ಮಕ್ಕಳ ಮದ್ಯೆ ವಾಟ್ನಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ರಾಮಯ್ಯನ ಆಸ್ತಿಯಲ್ಲಿ ಆತನ ಎಲ್ಲಾ ಮಕ್ಕಳಿಗೂ ಸಹ ಹಕ್ಕು ಇರುತ್ತದೆಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಸರ್ವೆ ನಂಬರ 406/4 ನೇದ್ದನ್ನು ಈಗ 40 ವರ್ಷಗಳ ಹಿಂದೆ ಖರೀದಿಸಿರುತ್ತೇವೆ. ನನಗೆ ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ ಆದರೆ ಸನ್ 1986 ರಲ್ಲಿ ಖರೀದಿಸಿರುತ್ತೇವೆ. ಸದರಿ ಜಮೀನನ್ನು ಖರೀದಿಸುವಾಗ ನನ್ನ ವಯಸ್ಸು

18-20 ವರ್ಷ ಇರಬಹುದು. ಆ ಸಮಯದಲ್ಲಿ ಏನೇನು ಕಾಗದ ಪತ್ರಗಳನ್ನು ನೋಡಿರುತ್ತೀರಿ? ಎಂದರೆ ಸಾಕ್ಷಿಯು ದೇವೇಂದ್ರಯ್ಯನ ಹೆಸರಿಗೆ ಸದರಿ ಜಮೀನು ದಾಖಲೆ ಇದ್ದು, ಆತನು ತನ್ನ ಮನೆಯ ಅಡಚಣೆಯ ಸಲುವಾಗಿ ಮಾರಾಟ ಮಾಡುತ್ತೇನೆಂದು ಹೇಳಿದ್ದರಿಂದ ನಾವು ಸದರಿ ಜಮೀನನ್ನು ಖರೀದಿಸಿರುತ್ತೇವೆ. ಸದರಿ ಜಮೀನಿನ ಹಳೆಯ ಪಹಣಿಪತ್ರಿಕೆಗಳು, ಮ್ಯುಟೇಶನ್ ಮತ್ತು ಋಣಭಾರ ಪ್ರಮಾಣಪತ್ರಗಳನ್ನು ತೆಗೆಸಿ ನೋಡಿರುವುದಿಲ್ಲ. ಸದರಿ ದಾಖಲೆಗಳನ್ನು ಪಡೆದುಕೊಂಡು ಪರಿಶೀಲನೆ ಮಾಡಲು ತೊಂದರೆ ಇರಲಿಲ್ಲ ಎಂದರೆ ನಿಜ. ಸದರಿ ಜಮೀನನ್ನು ಮಾರಾಟ ಮಾಡುತ್ತೇನೆಂದು ದೇವೇಂದ್ರಯ್ಯಾನೇ ಹೇಳಿರುತ್ತಾನೆ. ಆ ಸಮಯದಲ್ಲಿ ನಾನು ಹಾಗೂ ನನ್ನ ತಂದೆ ಇದ್ದೆವು. ಸದರಿ ಜಮೀನನ್ನು ಖರೀದಿಸುತ್ತಿರುವ ಬಗ್ಗೆ ದೇವೇಂದ್ರಯ್ಯನ ಸಹೋದರ-ಸಹೋದರಿಯರನ್ನು ವಿಚಾರಿಸಿರುತ್ತೇವೆ. ಸದರಿ ಜಮೀನನ್ನು ಖರೀದಿಸುತ್ತಿರುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುವುದಿಲ್ಲ. ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ತೊಂದರೆ ಇರಲಿಲ್ಲ. ಸದರಿ ಜಮೀನಿನ ಖರೀದಿ ಪತ್ರಕ್ಕೆ ದೇವೇಂದ್ರಯ್ಯನನ್ನು ಹೊರತುಪಡಿಸಿ ಆತನ ಸಹೋದರ-ಸಹೋದರಿಯರು ಯಾರು ಸಹಿ ಮಾಡಿರುವುದಿಲ್ಲ ಎಂದರೆ ನಿಜ. ಅದೇ ರೀತಿ ಖರೀದಿ ಮೊತ್ತವನ್ನು ಅವರಿಗೆ ಯಾರಿಗೂ ಕೊಟ್ಟಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ದೇವೇಂದ್ರಯ್ಯನಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ರೂ. 2 ಸಾವಿರಗಳನ್ನು ದೇವೇಂದ್ರಯ್ಯನಿಗೆ ಕೊಟ್ಟಿರುತ್ತೇವೆ. ಸದರಿ ಹಣವನ್ನು ನಮ್ಮ ಸ್ವಂತ ದುಡಿಮೆಯಿಂದ ಕೊಟ್ಟಿರುತ್ತೇವೆ. ಸದರಿ ಖರೀದಿ ಪತ್ರಕ್ಕೆ ದೇವೇಂದ್ರಯ್ಯನ ಸಹೋದರ ಸಹೋದರಿಯರ ಸಹಿಗಳನ್ನು ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

ಸದರಿ ದೇವೆಂದ್ರಯ್ಯ ತನ್ನ ಅಡಚಣೆಗಾಗಿ ಮೇಲೆ ಹೇಳಿದ ಜಮೀನನ್ನು ನಮಗೆ ಮಾರಾಟ ಮಾಡಿರುತ್ತಾನೆ. ಆತನು ಅನಾರೋಗ್ಯದಿಂದ ಬಳಲುತ್ತಿದ್ದನು. ಸದರೀ ಸಂಗತಿಯನ್ನು ಪ್ರತಿವಾದಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಾಗಲೀ ಹೇಳಿ ಬರೆಸಿಲ್ಲ.

ಸದರಿ ಜಮಿನಿನಲ್ಲಿ ನಾವು ಖರೀದಿಸುವುದಕ್ಕಿಂತ ಮುಂಚೆಯೇ ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದರು ಎಂದರೆ ಸಾಕ್ಷಿಯು ಏನೂ ಬೆಳೆ ಬೆಳೆಯುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಿಂದ ಅವರಿಗೆ ಸಾಕಷ್ಟು ಆದಾಯ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಯಾವುದೇ ಹಣಕಾಸಿನ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದೇವೆಂದ್ರಯ್ಯನು ಶಾಲೆ ಕಲಿತಿರಲಿಲ್ಲ ಎಂದರೆ ನಿಜ. ಆತನಿಗೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ನಿಜ.

ನಮ್ಮ ಖರೀದಿ ಪತ್ರದಲ್ಲಿ ಮೃತ ದೇವೇಂದ್ರಯ್ಯನಿಗೆ ಆಸ್ಪತ್ರೆಯ ಖರ್ಚಿಗಾಗಿ ಹಣದ ಅವಶ್ಯಕತೆ ಇತ್ತು ಎಂದು ಹೇಳಿ ಬರೆಸಿರುವುದಿಲ್ಲ. ಸದರಿ ದೇವೇಂದ್ರಯ್ಯನು ಕುಷ್ಠ ರೋಗದಿಂದ ಬಳಲುತ್ತಿದ್ದು ಎರಡೂ ಕೈ ಕಾಲುಗಳು ಸರಿಯಾಗಿ ಸ್ವಾಧೀನದಲ್ಲಿ ಇರಲಿಲ್ಲ. ಆತ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆಂದು ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಪೂರ್ವದಲ್ಲಿ ಆತ ಕುಷ್ಠ ರೋಗದಿಂದ ಬಳಲುತ್ತಿದ್ದ ಬಗ್ಗೆ ನನಗೆ ಮಾಹಿತಿ ಇತ್ತು. ಸದರಿ ವಿಷಯದ ಬಗ್ಗೆ ನಾನು ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ಸದರಿ ಸಂಗತಿಯನ್ನು ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ಪ್ರತಿವಾದ ಪತ್ರದಲ್ಲಾಗಲೀ ಹೇಳಿ ಬರೆಸಿರುವುದಿಲ್ಲ. ಸದರಿ ಸಂಗತಿಯನ್ನು ಹೇಳಿ ಬರೆಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ4 ರಿಂದ 7 ಖರೀದಿ ಪತ್ರಗಳು ಒಂದೇ ವರ್ಷದ ಅವಧಿಯೊಳಗೆ ಆಗಿರುತ್ತವೆ ಎಂದರೆ ಸಾಕ್ಷಿಯು 2-3 ವರ್ಷದ ಅವಧಿಯಲ್ಲಿ ಆಗಿರುತ್ತವೆ ಎಂದು

ನುಡಿಯುತ್ತಾರೆ. ಸಾಮಾನ್ಯವಾಗಿ ಜಮೀನುಗಳ ಬೆಲೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತವೆ ಎಂದರೆ ನಿಜ. ಸನ್ 2003 ರಿಂದ ಸನ್ 2011 ರವರೆಗೆ ಸರ್ವೆ ನಂಬರ 406/4 ರ ಮೇಲೆ ಯಾವುದೇ ಬ್ಯಾಂಕ ಸಾಲ ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ ನಾನು ಸದರಿ ಜಮೀನಿನ ಮೇಲೆ ಬ್ಯಾಂಕ ಸಾಲ ಪಡೆದಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ 9ನೇ ಪ್ರತಿವಾದಿಯು ಸಹ ತಾನು ಖರೀದಿಸುತ್ತೇನೆಂದು ಹೇಳಿದ ಜಮೀನಿನ ಮೇಲೆ ಸನ್ 2011 ರವರೆಗೆ ಬ್ಯಾಂಕ ಸಾಲ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ64 ಮತ್ತು ನಿಡಿ.65 ರಂತೆ ಹಾಜರುಪಡಿಸಿದ ಕರ ಪಾವತಿಯು ನಮ್ಮ ಜಮೀನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ75 ರಿಂದ ನಿಡಿ81ರವರೆಗೆ ಹಾಜರುಪಡಿಸಿದ ಕಬ್ಬಿನ ತೂಕದ ಪಾವತಿಗಳಲ್ಲಿ ಸರ್ವೆ ನಂಬರ ನಮೂದಿಸಿರುವುದಿಲ್ಲ ಹಾಗೂ ನಮ್ಮ ಜಮೀನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.82 ರಿಂದ 87 ರಂತೆ ಹಾಜರುಪಡಿಸಿದ ದಾಖಲೆಗಳು ದಾವಾ ಆಸ್ತಿಗಳಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ88-89 ನೇದ್ದವುಗಳನ್ನು ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಬಗ್ಗೆ ತೋರಿಸಲು ಹಾಜರುಪಡಿಸಿರುತ್ತೇನೆ. ಸದರಿ ಜಮೀನಿನಲ್ಲಿ ಕಟ್ಟಿಕೊಂಡ ಮನೆ ನಂಬರ ನನಗೆ ಹೇಳಲು ಆಗುವುದಿಲ್ಲ. ನಿಡಿ.91 ಹಾಗೂ ನಿಡಿ.92 ದಾಖಲೆಗಳು ದಾವೆ ಹಾಕಿದ ನಂತರದ ದಾಖಲೆಗಳು ಆಗಿರುತ್ತವೆ ಎಂದರೆ ನಿಜ. ದಾವಾ ಆಸ್ತಿಗಳು ಇವತ್ತಿಗೂ ಸಹ ವಾದಿ ಹಾಗೂ 1ರಿಂದ 6ನೇ ಪ್ರತಿವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿದ್ದು, ಅವರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆಯಲ್ಲಿ ನಾವು ಇದ್ದು, ಅವುಗಳನ್ನು ಅಭಿವೃದ್ಧಿಪಡಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಖರೀದಿಸಿದ ಜಮೀನದಲ್ಲಿ ಅಭಿವೃದ್ಧಿಪಡಿಸಿದ ಬಗ್ಗೆ ಯಾವುದೇ

ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಾವು ಅಭಿವೃದ್ಧಿಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿ ಜಿ ಪಿ ಸಿ ನಂಬರ 70/1 ನೇದ್ದನ್ನು ಮೃತ 4 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ ಆದರೆ 7 ನೇ ಪ್ರತಿವಾದಿಯು ಮಾಲೀಕಳು ಹಾಗೂ ಕಬ್ಜೆಯಲ್ಲಿರುತ್ತಾಳೆ. ಸದರಿ ಸಂಗತಿಯನ್ನು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ಆಸ್ತಿಯನ್ನು 4 ನೇ ಪ್ರತಿವಾದಿಗೆ ಪಂಚಾಯತಿಯಲ್ಲಿ ಡಿಕ್ರಿ ಮಾಡಿಸಿಕೊಟ್ಟಿರುತ್ತಾಳೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ 4 ನೇ ಪ್ರತಿವಾದಿಯು ಯಾವುದೇ ಕಾಲಕ್ಕೂ ಸದರಿ ಆಸ್ತಿಯನ್ನು ಬಿಟ್ಟು ಕೊಡದೇ ಇದ್ದರೂ ಸಹ ಪಂಚಾಯತಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ 7ನೇ ಪ್ರತಿವಾದಿಯು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾಳೆಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳ ವ್ಯವಹಾರದ ಬಗ್ಗೆ ನನಗೆ ಯಾವುದೇ ರೀತಿ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಸಂಗತಿಗಳುಳ್ಳ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿ ನಮಗೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ ಪಾಲು ಹೋಗಬಾರದೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ್ಟ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ ದೇವೇಂದ್ರಯ್ಯನು ಕುಷ್ಠ ರೋಗದಿಂದ ಬಳಲುತ್ತಿದ್ದುದರ ಪ್ರಯೋಜನವನ್ನು ಪಡೆದುಕೊಂಡು ಆತನ ಪಾಲಿನ ಆಸ್ತಿಯನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ನಮ್ಮ ತಂದೆ ಸುಳ್ಳು ಖರೀದಿ ಪತ್ರಗಳನ್ನು ಸೃಷ್ಟಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ದೇವೆಂದ್ರಯ್ಯನು ಯಾವ ಕಾಲಕ್ಕೂ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಖರೀದಿ ಪತ್ರಗಳನ್ನು ಬರೆದುಕೊಟ್ಟಿರುವುದಿಲ್ಲ ಹಾಗೂ ಸದರೀ ಖರೀದಿ ಪತ್ರಗಳ ಮೇಲಿರುವ ಹೆಬ್ಬೆಟ್ಟಿನ

ಗುರುತುಗಳು ಆತನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಡಿಡಬ್ಲುಃ2 ರವರ ತಂದೆ ಚೆನ್ನಯ್ಯ ಹಿರೇಮಠರವರು ಮೃತ ದೇವೆಂದ್ರಯ್ಯನನ್ನು ಆಸ್ಪತ್ರೆಗೆ ಕರೆದುಕೊಂಡು ಬರುವ ನೆಪದಲ್ಲಿ ಕರೆದುಕೊಂಡು ಬಂದು ನಮ್ಮ ಹೆಸರಿನಲ್ಲಿ ಖೊಟ್ಟಿ ಕಾಗದಪತ್ರಗಳನ್ನು ಸೃಷ್ಟಿಸಿಕೊಂಡಿರುತ್ತಾನೆಂದರೆ ಸರಿಯಲ್ಲ. ಸದರಿ ಖೊಟ್ಟಿ ಖರೀದಿ ಪತ್ರಗಳ ಆದಾರದ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಪ್ರಾಪ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ದಾಖಲೆಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ